# ಒಂದನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

CC No.:-303/2013
C.W.:-1
P.W.:-1

ಸಾಕ್ಷಿದಾರರ ಹೆಸರು : ನವೀಲಮ್ಮ
ತಂದೆಯ ಹೆಸರು ಃ ದೊಡ್ಡಸ್ವಾಮಿಗೌಡ
ವಯಸ್ಸು : 48 ವರ್ಷ
ಉದ್ಯೋಗ : ಕೂಲಿ
ಸಾಕೀನ : ಬಿಲ್ಲಪತ್ರೆದೊಡ್ಡಿ ಗ್ರಾಮ

ಸಾಕ್ಷಿಗೆ ಈ ದಿನ ದಿಃ 09-12-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ನನಗೆ ಆರೋಪಿತರು ಗೊತ್ತು.

ಈಗ 5 ವರ್ಷಗಳ ಹಿಂದೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ನಾನು ನನ್ನ ಮನೆಯಲ್ಲಿರುವಾಗ 1 ನೇ ಆರೋಪಿಯು ಒಳಗೆ ಬಂದಿದ್ದು, ಆನಂತರ 2 ನೇ ಆರೋಪಿಯು ಬಂದಿದ್ದು, 1 ನೇ ಆರೋಪಿಯು ನನ್ನ ಜುಟ್ಟನ್ನು ಹಿಡಿದು ಎಳೆದಾಡಿದ್ದು, 2 ನೇ ಆರೋಪಿಯು ಕಲ್ಲಿನಿಂದ ಕಾಲಿಗೆ ಹೊಡೆದಿದ್ದು, 3 ನೇ ಆರೋಪಿಯು ದೊಣ್ಣೆಯಿಂದ ನನ್ನ ಎಡತೋಳಿಗೆ ಹಾಗೂ ಭುಜಕ್ಕೆ ಹೊಡೆದಿರುತ್ತಾರೆ. ಆ ಸಮಯಕ್ಕೆ ಚಾಸಾ-7 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಅದೇ ದಿನ ನಾನು ಬೆಳಿಗ್ಗೆ 10.30 ಕ್ಕೆ ಸಾತನೂರಿನ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ನ್ಯಾಯ ಮಾಡಲು ಆರೋಪಿತರು ಬರಲಿಲ್ಲ, ನಾನು ದೂರನ್ನು ಸಾತನೂರು ಪೊಲೀಸ್ ಠಾಣೆಯಲ್ಲಿ ಕೊಟ್ಟಿರುತ್ತೇನೆ. ಗಲಾಟೆಯಾದ ಮಾರನೇ ದಿನ ನಾನು ದೂರನ್ನು ಕೊಟ್ಟಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ದೂರಾಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಆನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ಘಟನೆಯ ಬಗ್ಗೆ ವಿಚಾರ ಮಾಡಿ ಕಲ್ಲು ಮತ್ತು ದೊಣ್ಣೆಯನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನನಗೆ ಪೊಲೀಸರು ಯಾವ ಸಮಯಕ್ಕೆ ಮಹಜರ್ ಗಾಗಿ ಬಂದಿದ್ದರು ಎಂದು ಗೊತ್ತಾಗುವುದಿಲ್ಲ.

ಸಾಕ್ಷಿಗೆ ಈಗ ದೊಣ್ಣೆ ಮತ್ತು ಕಲ್ಲನ್ನು ತೋರಿಸಿದ್ದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ದೊಣ್ಣೆ ಮತ್ತು ಕಲ್ಲುಗಳಿಂದ ಆರೋಪಿತರು ತನಗೆ ಹಲ್ಲೆ ಮಾಡಿದ್ದಾಗಿ ನುಡಿಯುತ್ತಾರೆ. ಸದರಿ ದೊಣ್ಣೆ ಮತ್ತು ಕಲ್ಲನ್ನು ಕ್ರಮವಾಗಿ ಮು.ಮ-1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿದ್ದು ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ

ದಿಃ9-11-2012 ರಂದು ಬೆಳಿಗ್ಗೆ 9 ಗಂಟೆಗೆ 1 ರಿಂದ 3 ನೇ ಆರೋಪಿತರು ನಮ್ಮ ಮನೆ ಬಳಿ ಬಂದು ಕೆರೆಯ ಹತ್ತಿರ ದನದ ಮೈ ತೊಳೆಯುವುದಕ್ಕೆ ಏಕೆ ಹೋಗಿರುತೀರಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಾಲಿಂದ ಒದ್ದಿರುತ್ತಾರೆಂದರೆ ಸರಿ. 1 ನೇ ಆರೋಪಿಯು ನನ್ನ ಜುಟ್ಟು ಹಿಡಿದು ಎಳೆದಾಡಿ ಕೆಳಗೆ ಕೆಡವಿ ಕಾಲಿಂದ

ಒದ್ದಿರುತ್ತಾರೆಂದರೆ ಸರಿ. ಚಾಸಾ-4,6 ಮತ್ತು 7 ರವರು ಬಿಡಿಸಿದರೂ ಸಹ ನನ್ನ ಗಂಡ ದೊಡ್ಡಸ್ವಾಮಿಗೆ ಕುತ್ತಿಗೆ ಹಿಡಿದು ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ನಾನು ದಿಃ13-11-2012 ರಂದು ನನ್ನ ದೂರನ್ನು ನೀಡಿರುತ್ತೇನೆಂದರೆ ಸರಿ. ನಾನು ದೂರು ಕೊಟ್ಟ ದಿನ ಸಂಜೆ 5 ಗಂಟೆಯಿಂದ 5.45 ರ ಸಮಯದಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆಂದರೆ ಸರಿ. ಆ ಸಮಯಕ್ಕೆ ನಾನು ಮು.ಮ-1 ಮತ್ತು 2 ನ್ನು ಹಾಜರು ಮಾಡಿರುತ್ತೇನೆಂದರೆ ಸರಿ.

<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ</u>

ಬಿಲ್ಲಪತ್ರೆದೊಡ್ಡಿಯಲ್ಲಿ ಸುಮಾರು 4-5 ಮನೆ ಇದೆ. ಅಲ್ಲಿ 3-4 ಸಂಸಾರಗಳು ವಾಸವಿರುತ್ತಾರೆ. ಕಬ್ಬಾಳುವಿನಿಂದ ಸದರಿ ಬಿಲ್ಲಪತ್ರೆದೊಡ್ಡಿಗೆ ಒಂದುವರೆ ಮೈಲಿ ಆಗುತ್ತದೆ. ಅದೇ ರೀತಿ ವೆಂಕಟರಾಯನದೊಡ್ಡಿಗೂ 3-4 ಕಿಲೋ ಮೀಟರ್ ಆಗುತ್ತದೆಂದರೆ ಸರಿ. ನಾನು ಕಟ್ಟಿರುವ ಮನೆಯನ್ನು 1 ನೇ ಆರೋಪಿಯಿಂದ ಖರೀದಿ ಮಾಡಿರುತ್ತೇನೆಂದರೆ ಸರಿ. 2011-12 ರಲ್ಲಿ ಈ ಘಟನೆಯ ಸಂದರ್ಭದಲ್ಲಿ ನಾನು ಮನೆಯನ್ನು ಕಟ್ಟಿ ಆಗಿತ್ತು. ಸದರಿ ಜಾಗದ ವಿಚಾರದಲ್ಲಿ ನನ್ನ ಮತ್ತು ಆರೋಪಿತರ ನಡುವೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ.

ಘಟನೆಯಾದ ದಿನಾಂಕ 9. ನನಗೆ ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಘಟನೆಯಾದ ದಿನ ನಾನು ಒಬ್ಬಳೇ ಮನೆಯಲ್ಲಿದ್ದೆ. ಆ ಸಂದರ್ಭದಲ್ಲಿ ಬೇರೆ ಯಾರು ಅಲ್ಲಿ ಇರಲಿಲ್ಲ. 2 ಮತ್ತು 3 ನೇ ಆರೋಪಿತರು ಮಳವಳ್ಳಿ ಹಾಗೂ ಕಬ್ಬಾಳುವಿನಲ್ಲಿ ಮೆಡಿಕಲ್ ಶಾಪ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಅವರಿಬ್ಬರ ಸಂಸಾರ ಬೆಂಗಳೂರಿನಲ್ಲಿ ವಾಸವಿದೆ ಎಂದರೆ ಸರಿ. 1 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದು ಎಳೆದಾಡಿದಾಗ ನಾನು ಮನೆಯ ಒಳಗಡೆಯಿಂದ ಹೊರಗೆ ಬಂದಿರುತ್ತೇನೆ. ನನ್ನ ಮತ್ತು 1 ನೇ ಆರೋಪಿಯ ಮನೆ ಅಕ್ಕಪಕ್ಕವಿದೆ. ನನಗೆ ಮಾರಾಟ ಮಾಡಿದ ಜಾಗಕ್ಕಿಂತ ಹೆಚ್ಚಿನ ವಿಸ್ತೀರ್ಣ ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತೇನೆಂದರೆ ಸರಿಯಲ್ಲ. ಆ ವಿಚಾರದಲ್ಲಿ ನಮಗೂ ಅವರಿಗೂ ಆಗಾಗ ಆಗುತ್ತಿರಲಿಲ್ಲ ಎಂದರೆ ಸರಿ.

ಘಟನೆಯಾದ ದಿನ 2 ಮತ್ತು 3 ನೇ ಆರೋಪಿತರು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ದೊಣ್ಣೆ ಹಾಗೂ ಕಲ್ಲುಗಳಿಂದ ಹೊಡೆಯದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-7 ನಮ್ಮ ಊರಿನವರು. ಚಾಸಾ-7 ರವರನ್ನು ಬಿಟ್ಟರೇ ಆ ಸಂದರ್ಭದಲ್ಲಿ ಬೇರೆ ಯಾರು ಇರಲಿಲ್ಲ. ನನ್ನ ತಮ್ಮ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಆಸ್ಪತ್ರೆಗೆ ಹೋಗಿ ಬಂದು ಅದೇ ದಿನ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಆ ದಿನ ಬಿಟ್ಟು ನಾನು ಬೇರೆ ದಿನ ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಸದರಿ ಸಹಿಯನ್ನು ತಾನು ಪೊಲೀಸ್ ಠಾಣೆಯಲ್ಲಿ ಮಾಡಿರುವುದಾಗಿ ನುಡಿಯುತ್ತಾರೆ. ನಿಪಿ-2 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ನಿಪಿ-2 ಕ್ಕೆ ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತಾರೆ. ನನಗೆ ಹಲ್ಲೆ ಮಾಡಿದ ದೊಣ್ಣೆಯು ಇಂತಹ ಜಾತಿ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಮು.ಮ-1 ಮತ್ತು 2 ರಂತಹ ವಸ್ತುಗಳು ನಮ್ಮ ಊರಿನಲ್ಲಿ ಎಲ್ಲಾ ಕಡೆ ಸಿಗುತ್ತವೆಂದರೆ ಸರಿ. ಹಾಗಾಗಿ ಇಂತಹದೇ ಕಲ್ಲು ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬಂದು ಕಲ್ಲು ಮತ್ತು ದೊಣ್ಣೆಯನ್ನು ತೆಗೆದುಕೊಂಡು ಹೋಗಿದ್ದು ಇಂತಹ ಕಲ್ಲು ಮತ್ತು ದೊಣ್ಣೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿತರ ಜಮೀನನ್ನು ಒತ್ತುವರಿ ಮಾಡಿದ್ದು ಅದನ್ನು ಕೇಳುತ್ತಿರುವ ಕಾರಣ ಈ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಲಯ,
ಕನಕಪುರ